RNI No. **KARBIL/2001/47147**

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೮ Volume 148	ಬೆಂಗಳೂರು, ಗುರುವಾರ, ಮಾರ್ಚ್ ೨೧, ೨೦೧೩ (ಫಾಲ್ಗುಣ ೩೦, ಶಕ ವರ್ಷ ೧೯೩೪) Bangalore, Thursday, March 21, 2013 (Phalguna 30, Shaka Varsha 1934)	ಸಂಚಿಕೆ ೧೨ Issue 12

ಭಾಗ ೨

ನೇಮಕಗಳು, ಸ್ಥಳ ನೇಮಕಗಳು, ವರ್ಗಾವಣೆಗಳು, ರಜೆ ಮತ್ತು ಅಧಿಕಾರಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆಗಳು

ಶಿಕ್ಷಣ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಇಡಿ 04 ಡಿಜಿಓ 2011, ಬೆಂಗಳೂರು, ದಿನಾಂಕ 07-02-2013

ಶ್ರೀ ಬಿ. ಕೆ. ಶಿವಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ಇವರ ವಿರುದ್ಧ ದಾಖಲಾದ ಲಂಚ ನಿರೋಧಿ ಪ್ರಕರಣದಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14(ಎ) ರನ್ವಯ ಮಾನ್ಯ ಉಪ ಲೋಕಾಯುಕ್ತರು-1 ಕರ್ನಾಟಕ ಲೋಕಾಯುಕ್ತ ಇವರಿಗೆ ವಹಿಸಿ ಸರ್ಕಾರದ ಆದೇಶ ಸಂಖ್ಯೆ : ಇಡಿ 04 ಡಿಜಿಓ 2011 ದಿನಾಂಕ 07ನೇ ಜನವರಿ 2012 ರಂತೆ ಆದೇಶಿಸಲಾಗಿತ್ತು. ಸದರಿ ಆದೇಶವನ್ನು ದಿನಾಂಕ 07-01-2013 ರಂದು ಹೊರಡಿಸಲಾಗಿರುತ್ತದೆ. ಆದ್ದರಿಂದ ಸದರಿ ಆದೇಶದಲ್ಲಿ **"ದಿನಾಂಕ 07ನೇ ಜನವರಿ 2012"** ಎಂದು ತಪ್ಪಾಗಿ ನಮೂದಾಗಿರುವುದನ್ನು **"ದಿನಾಂಕ 07ನೇ ಜನವರಿ 2013"** ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಬಿ. ಪಟಗಾರ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಸಾಮಾನ್ಯ).

P.R. 130

ಇಂಧನ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಇಎನ್ 21 ಸಮನ್ವಯ 2013, ಬೆಂಗಳೂರು, ದಿನಾಂಕ 07-02-2013

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು ಇದರ ಮೆಮೊರ್ಯಾಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಕಲಂ 22 (1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಶಂಕರರಾವ್, ಅಧಿಕಾರೇತರ ನಿರ್ದೇಶಕರು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು ಇವರ ನಾಮನಿರ್ದೇಶನವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿ ಇವರ ಜಾಗದಲ್ಲಿ ಶ್ರೀ ಸಿ. ರಮೇಶ್, ಮಾಜಿ ವಿಧಾನ ಪರಿಷತ್ ಸದಸ್ಯರು, ಮೈಸೂರು ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅಧಿಕಾರೇತರ ನಿರ್ದೇಶಕರನ್ನಾಗಿ ನೇಮಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎ.ಎ. ಚಪ್ಪರಬಂದ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

P.R. 131

ಇಂಧನ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಇಎನ್ 154 ಸಮನ್ವಯ 2012, ಬೆಂಗಳೂರು, ದಿನಾಂಕ 16–01–2013

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇದರ ಮೆಮೊರ್‍ಯಾಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಆರ್ಟಿಕಲ್ 51 (ಎ) ಮತ್ತು 52 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಷಣ್ಮುಖ ಗುರಿಕಾರ ರವರನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಈ ಸಂಸ್ಥೆಯ ಅಧಿಕಾರೇತರ ನಿರ್ದೇಶಕರು ಹಾಗೂ ಅಧ್ಯಕ್ಷರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್,
ಸರ್ಕಾರದ ಉಪ ಕಾರ್ಯದರ್ಶಿ,
ಇಂಧನ ಇಲಾಖೆ.

P.R. 132

ಇಂಧನ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಇಎನ್ 04 ಸಮನ್ವಯ 2013, ಬೆಂಗಳೂರು, ದಿನಾಂಕ 10–01–2013

ಸರ್ಕಾರದ ಅಧಿಸೂಚನೆ ಸಂಖ್ಯೆ : 230 ಆಸೇವ 2012, ದಿನಾಂಕ 09–01–2013 ರಲ್ಲಿ ಎಸ್. ಪಾಲಯ್ಯ, ಕೆ.ಎ.ಎಸ್. (ಹಿ.ಶ್ರೇ) ಪ್ರಸ್ತುತ ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ ಇವರನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ, ಬೆಂಗಳೂರು ಈ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾಸಂ) ಹುದ್ದೆಗೆ ಶ್ರೀ ಸಿ.ಆರ್. ವಿಜಯ್‌ದೇವ್ ಇವರ ಜಾಗದಲ್ಲಿ ನೇಮಿಸಲು ಇವರ ಸೇವೆಯನ್ನು ಇಂಧನ ಇಲಾಖೆಯ ವಶಕ್ಕೆ ನೀಡಲಾಗಿದೆ. ಅದರನ್ವಯ ಶ್ರೀ ಎಸ್. ಪಾಲಯ್ಯ, ಕೆ.ಎ.ಎಸ್. (ಹಿ.ಶ್ರೇ) ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾಸಂ) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ, ಬೆಂಗಳೂರು ಇಲ್ಲಿ ಶ್ರೀ ಆರ್. ವಿಜಯ್‌ದೇವ್ ಇವರ ಸ್ಥಳಕ್ಕೆ ಮರುಸ್ಥಳನಿಯುಕ್ತಿಗೊಳಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎ.ಎ. ಚಪ್ಪರಬಂದ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

P.R. 133

ಇಂಧನ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಇಎನ್ 18 ಸಮನ್ವಯ 2013, ಬೆಂಗಳೂರು, ದಿನಾಂಕ 04–02–2013

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 08 ಎಸ್‌ಎಫ್‌ಪಿ 2013 ದಿನಾಂಕ 01–02–2013 ರಲ್ಲಿ ಶ್ರೀಮತಿ ಮಧು ಶರ್ಮಾ, ಐ.ಎಫ್.ಎಸ್. (ಕೆಎನ್–86) ಇವರನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು ಇಲ್ಲಿ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪರಿಸರ ಮತ್ತು ಅರಣ್ಯ) ಹುದ್ದೆಗೆ ನಿಯೋಜಿಸಲು ಇವರ ಸೇವೆಯನ್ನು ಇಂಧನ ಇಲಾಖೆಯ ವಶಕ್ಕೆ ನೀಡಲಾಗಿದೆ. ಅದರನ್ವಯ ಶ್ರೀಮತಿ ಮಧು ಶರ್ಮಾ, ಐ.ಎಫ್.ಎಸ್. (ಕೆಎನ್–86) ಇವರನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು ಇಲ್ಲಿ ಖಾಲಿ ಇರುವ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪರಿಸರ ಮತ್ತು ಅರಣ್ಯ) ಹುದ್ದೆಗೆ ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಮರುಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

ಇವರ ನಿಯೋಜನೆಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎ.ಎ. ಚಪ್ಪರಬಂದ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

P.R. 134

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಆರ್‌ಡಿ 167 ಎಲ್‌ಜಿಎ 2012, ಬೆಂಗಳೂರು, ದಿನಾಂಕ 29–09–2012

ಸರ್ಕಾರದ ಅಧಿಸೂಚನೆ ಸಂಖ್ಯೆ ಆರ್‌ಡಿ 139 ಎಲ್‌ಜಿಎ 2008, ದಿನಾಂಕ 16–01–2010 ನ್ನು ಭಾಗಶಃ ಮಾರ್ಪಡಿಸಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕು ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಿಸಲಾಗಿದ್ದ ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ, ಮಾನ್ಯ ಶಾಸಕರು, ಕುಂದಾಪುರ ವಿಧಾನಸಭಾ ಕ್ಷೇತ್ರ ಇವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಹಾಲಿ ಸದಸ್ಯರಾಗಿರುವ ಶ್ರೀ ಕೆ. ಲಕ್ಷ್ಮೀನಾರಾಯಣ,

ಮಾನ್ಯ ಶಾಸಕರು, ಬೈಂದೂರು ವಿಧಾನಸಭಾ ಕ್ಷೇತ್ರ ಇವರನ್ನು ಅಧ್ಯಕ್ಷರನ್ನಾಗಿ ನೇಮಿಸಿ ಹಾಲಿ ಸದಸ್ಯರಾಗಿರುವ ಶ್ರೀ ಕೆ. ಲಕ್ಷ್ಮೀನಾರಾಯಣ, ಮಾನ್ಯ ಶಾಸಕರು, ಬೈಂದೂರು ವಿಧಾನಸಭಾ ಕ್ಷೇತ್ರ ಇವರ ಸ್ಥಾನಕ್ಕೆ ಶ್ರೀ ಹದ್ದೂರು ರಾಜೀವಶೆಟ್ಟಿ ಬಿನ್ ದಿ. ಕೃಷ್ಣಯ್ಯ ಶೆಟ್ಟಿ, ಹದ್ದೂರು ಮೇಲ್ಮನೆ, ಶಂಕರನಾರಾಯಣ ಗ್ರಾಮ, ಕುಂದಾಪುರ ತಾಲ್ಲೂಕು ಇವರನ್ನು ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ. ಶಿವಲಿಂಗಯ್ಯ,
ಪೀಠಾಧಿಕಾರಿ,
ಕಂದಾಯ ಇಲಾಖೆ (ಭೂ. ಮಂ.–2)

P.R. 135

ಯುವಜನ ಸೇವಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಯುಸೇಇ 89 ಯುಇಸೇ 2012, ಬೆಂಗಳೂರು, ದಿನಾಂಕ 01–02–2013

ಶ್ರೀ ಬಿ. ಶ್ರೀನಿವಾಸ, ಸಹಾಯಕ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಗುಲ್ಬರ್ಗಾ ಇವರನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಧಾರವಾಡ ಇಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಿ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ. ಎ. ಹಿದಾಯತ್ತುಲ್ಲ,
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವಜನ ಸೇವಾ ಇಲಾಖೆ.

P.R. 136

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಕಾಇ 23 ಎಲ್ಇಟಿ 2013, ಬೆಂಗಳೂರು, ದಿನಾಂಕ 31–01–2013

ಶ್ರೀ ಜೆ.ಎಂ. ಜಯದೇವಯ್ಯ, ಉಪ ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ ಹಾಗೂ ಪ್ರಸ್ತುತ ನಿಯೋಜನೆ ಮೇರೆಗೆ ಉಪ ಕಾರ್ಯದರ್ಶಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವೇತನ ಶ್ರೇಣಿ ರೂ. 40050–1050–45300–1200–52500–1350–56550 ರಲ್ಲಿನ ಜಂಟಿ ಕಾರ್ಮಿಕ ಆಯುಕ್ತರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಲಾಗಿದೆ. ಈ ಮುಂಬಡ್ತಿ ಮೇರೆಗೆ ಒಂದು ದಿನದ ಮಟ್ಟಿಗೆ ಶ್ರೀ ಜೆ.ಟಿ. ಜಿಂಕಲಪ್ಪ, ಜಂಟಿ ಕಾರ್ಮಿಕ ಆಯುಕ್ತರು (ಕನಿಷ್ಠ ವೇತನ) ಇವರು ರಜೆಯ ಮೇಲೆ ತೆರಳಿರುವ ಹುದ್ದೆಯಲ್ಲಿ ನಿಯುಕ್ತಿಗೊಳಿಸಿದ್ದು, ಈ ಹುದ್ದೆಯ ಪ್ರಭಾರ ವಹಿಸಿಕೊಂಡ ಮಾರನೇ ದಿನದಿಂದ ಕಾರ್ಮಿಕ ಕಲ್ಯಾಣ ಮಂಡಳಿಯ ಕಲ್ಯಾಣ ಆಯುಕ್ತರ ಹುದ್ದೆಗೆ ಮುಂದಿನ ಆದೇಶದವರೆಗೆ ನಿಯೋಜನೆ ಮೇರೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಯು.ಎನ್. ನಾಗೇಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

P.R. 137

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಕಾಇ 186 ಎಲ್ಇಟಿ 2012, ಬೆಂಗಳೂರು, ದಿನಾಂಕ 07–02–2013

ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಶಾಖೆಯಲ್ಲಿ ಮ್ಯಾನೇಜರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಎಸ್. ನಿರ್ಮಲಕುಮಾರಿ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಗೆಜೆಟೆಡ್ ಮ್ಯಾನೇಜರ್ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಿ (ವೇತನ ಶ್ರೇಣಿ ರೂ. 28100–700–28800–800–33600–900–39000–1050–45300–1200–50100) ಕೇಂದ್ರ ಕಛೇರಿಯ ಆಡಳಿತ ಶಾಖೆಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಯು.ಎನ್. ನಾಗೇಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

P.R. 138

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಕಾಇ 37 ಎಲ್ಇಟ 2013, ಬೆಂಗಳೂರು, ದಿನಾಂಕ 31–01–2013

ಶ್ರೀ ಟಿ. ಶ್ರೀನಿವಾಸ್, ಜಂಟಿ ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, ಪ್ರಸ್ತುತ (ನಿಯೋಜನೆ ಮೇರೆಗೆ) ಜಂಟಿ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು ಇವರನ್ನು ಅವರ ಪ್ರಸ್ತುತ ಹುದ್ದೆಯ ಕರ್ತವ್ಯವೂ ಸೇರಿದಂತೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಕಲ್ಯಾಣ ಆಯುಕ್ತರ ಹುದ್ದೆಯ ಅಧಿಕ ಪ್ರಭಾರದಲ್ಲಿ ಇಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಯು.ಎನ್. ನಾಗೇಂದ್ರ,

ಸರ್ಕಾರದ ಅಧೀನ ಕಾರ್ಯದರ್ಶಿ,

ಕಾರ್ಮಿಕ ಇಲಾಖೆ.

P.R. 139

INFORMATION TECHNOLOGY, BIOTECHNOLOGY AND SCIENCE AND TECHNOLOGY SECRETARIAT

NOTIFICATION

No. ITD 52 DIS 2012, Bangalore, Dated: 27-12-2012.

In Notification No. DPAR 215 SFP 2012 dt. 24-12-2012, the services of Sri Ramachandra, IFS (KN-90), Chief Conservator of Forests are placed disposal of IT & BT and S&T Department for issuing reposting as Managing Director, KEONICS, Bangalore.

Sri Ramachandra, IFS (KN-90), Chief Conservator of Forests is reposted with immediate effect and until further orders as Managing Director, KEONICS, vice Shri Harikumar Jha, IFS (KN 87) transferred.

By Order and in the name of the Governor of Karnataka,

E. RAMAKRISHNAPPA

Under Secretary to Government,

Information Technology, Bio Technology and Science and Technology Department

P.R. 140

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಸಿಆಸುಇ 21 ಶಿಸನೇ 2013, ಬೆಂಗಳೂರು, ದಿನಾಂಕ : 5–2–2013.

ಶ್ರೀ ಪದ್ಮಾಕರ್ ಪಾಟೀಲ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ರಾಜ್ಯ ಸಚಿವ ಸ್ಥಾನಮಾನವನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ನಾಗರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ–2,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ರಾಜ್ಯ ಶಿಷ್ಟಾಚಾರ).

P.R. 141

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಸಿಆಸುಇ 9 ಶಿಸನೇ 2013, ಬೆಂಗಳೂರು, ದಿನಾಂಕ : 19–1–2013.

ಸರ್ಕಾರದ ಅಧಿಸೂಚನೆ ಸಂಖ್ಯೆ : ಪಿಡಿ 7 ಎಸ್‌ಪಿಬಿ 2013, ದಿನಾಂಕ : 18–1–2013 ರಲ್ಲಿ ಶ್ರೀ ರಾಮಚಂದ್ರ ಗೌಡ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರನ್ನು ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರನ್ನಾಗಿ ನೇಮಿಸಿದ್ದು, ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಸಂಪುಟ ದರ್ಜೆಯ ಸಚಿವರ ಸ್ಥಾನಮಾನವನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ನಾಗರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ–2,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ರಾಜ್ಯ ಶಿಷ್ಟಾಚಾರ).

P.R. 142

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಸಿಆಸುಇ 7 ಶಿಸನೇ 2013, ಬೆಂಗಳೂರು, ದಿನಾಂಕ : 5–2–2013.

ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷರಾದ ಶ್ರೀ ಇ. ಅಶ್ವಥ ನಾರಾಯಣ ಇವರಿಗೆ ಕೂಡಲೇ ಜಾರಿಗೆ ಬರುವಂತೆ ರಾಜ್ಯ ಸಚಿವ ಸ್ಥಾನಮಾನವನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ನಾಗರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ–2,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ರಾಜ್ಯ ಶಿಷ್ಟಾಚಾರ).

P.R. 143

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಸಿಆಸುಇ 10 ಶಿಸನೇ 2013, ಬೆಂಗಳೂರು, ದಿನಾಂಕ : 5–2–2013.

ಶ್ರೀ ತಿಂಗಳೆ ವಿಕ್ರಮಾರ್ಜುನ ಹೆಗ್ಡೆ, ಅಧ್ಯಕ್ಷರು, ಕರಾವಳಿ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು, ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ರಾಜ್ಯ ಸಚಿವ ಸ್ಥಾನಮಾನವನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ನಾಗರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ–2,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ರಾಜ್ಯ ಶಿಷ್ಟಾಚಾರ).

P.R. 144

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಕಾಇ 75 ಕಾಬಾಸೇ 2012, ಬೆಂಗಳೂರು, ದಿನಾಂಕ : 11–2–2013.

ಶ್ರೀ ಎಸ್.ಎ. ನರಸಿಂಹಮೂರ್ತಿ, ಕಾರ್ಖಾನೆಗಳ ಸಹಾಯಕ ನಿರ್ದೇಶಕರು, ವಿಭಾಗ–2, ಮಂಗಳೂರು, ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಇವರಿಗೆ ಅಧಿಸೂಚನೆ ಸಂ. ಕಾಇ 53 ಕಾಬಾಸೇ 2012(2), ದಿನಾಂಕ : 13–9–2012 ರ ಮೂಲಕ ಶ್ರೀ ಕೆ.ಜಿ. ನಂಜಪ್ಪ, ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ವಿಭಾಗ–02, ಮಂಗಳೂರು, ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಆಗಿದ್ದ ಇವರಿಗೆ ಕಾರ್ಖಾನೆಗಳ ಉಪ ನಿರ್ದೇಶಕರ ಹುದ್ದೆಗೆ ಪದೋನ್ನತಿ ನೀಡಲಾದ ಕಾರಣ, ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ವಿಭಾಗ–2, ಮಂಗಳೂರು, ಈ ಹುದ್ದೆಯು ತೆರವಾಗಿ, ಸರ್ಕಾರದ ಆದೇಶ ಸಂಖ್ಯೆ : ಕಾಇ 62 ಕಾಬಾಸೇ 2012(2) ದಿನಾಂಕ: 29–1–2013 ರಂತೆ ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ವಿಭಾಗ–02, ಮಂಗಳೂರು, ಕಛೇರಿಯು ಬೆಂಗಳೂರಿಗೆ ಸ್ಥಳಾಂತರಗೊಂಡು ಬೆಂಗಳೂರಿನಲ್ಲಿ ಸ್ಥಾಪನೆಯಾಗಿರುವ ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ವಿಭಾಗ–10, ಬೆಂಗಳೂರು, ಕಛೇರಿಯ ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು ಈ ಹುದ್ದೆಗೆ ವೇತನ ಶ್ರೇಣಿ ರೂ. 28100–700–28800–800–33600–900–39000–1050–45300–1200–50100 ರಲ್ಲಿ ಸ್ಥಾನಪನ್ನ ಪದೋನ್ನತಿ ನೀಡಿ, ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ. ಶಿವರಾಮ ಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ, (ಕಾರ್ಖಾನೆ ಮತ್ತು ಬಾಯ್ಲರುಗಳು).

P.R. 145

PERSONNEL AND ADMINISTRATIVE REFORMS SECRETARIAT

NOTIFICATION

No. DPAR 717 SAS 2012, Bangalore, dated : 12th February, 2013.

Sri Pankaj Kumar Pandey, IAS (2000), Commissioner, Employment & Training, Bangalore is placed in additional charge of the post of Officer On Special Duty (Expenditure Monitoring) in the office of the Chief Electoral Officer of Karnataka with immediate effect and until further orders.

By Order and in the name of the Governor of Karnataka,
U.H. NARAYANASWAMY
Under Secretary to Government,
DP & AR (Services-I)

P.R. 146

PERSONNEL AND ADMINISTRATIVE REFORMS SECRETARIAT

NOTIFICATION

No. DPAR 114 SAS 2013, Bangalore, dated : 14th February, 2013.

Sri Tushar Giri Nath, IAS (KN-93), Secretary to Deputy Chief Minister (Sri K.S. Eshwarappa, Hon'ble Deputy Chief Minister) is transferred with immediate effect and posted until further orders as Secretary to Government, Revenue Department (Disaster Management, Bhoomi & UPOR) in the existing vacancy.

Sri Tushar Giri Nath, IAS is also placed in additional charge of the post of **Secretary to Deputy Chief Minister (Sri K.S. Eshwarappa, Hon'ble Deputy Chief Minister)** until further orders.

By Order and in the name of the Governor of Karnataka,
U.H. NARAYANASWAMY
Under Secretary to Government,
DP & AR (Services-I)

PR. 147

PERSONNEL AND ADMINISTRATIVE REFORMS SECRETARIAT

ADDENDUM

No. SiAaSuYi 10 SeVuNya 2012, Bangalore, dated : 23-11-2012.

Sub : Appointment of District Judges as Presiding Officers of C.B.I. Courts.

After the words "following District Judges" appearing in the 5th line of the Notification No. : SiAaSuYi 10 SeVuNya 2012, dated 21-11-2012 the words "by name as special judges and" may be added and may be read as "following District Judges by name as special judges and as Presiding Officers" etc.

By Order and in the name of the Governor of Karnataka,
H.K. LAKHSMINARAYANA RAO
Under Secretary to Government,
Department of Personnel and Administrative Reforms (Services-3).

P.R. 148

PERSONNEL AND ADMINISTRATIVE REFORMS SECRETARIAT

CORRIGENDUM

No. SiAaSuYi 10 SeVuNya 2012, Bangalore, dated : 24-11-2012.

Sub : Appointment of District Judges as Presiding Officers of C.B.I. Courts.

The words "XLVIII Addl. City Civil and Session Judge" appearing at Sl. No. 2 Column No. 3 of Notification No. SiAaSuYi 10 SeVuNya 2012, dated : 21-11-2012 may be read as "XLVII Addl. City Civil and Sessions Judge".

By Order and in the name of the Governor of Karnataka,
H.K. LAKHSMINARAYANA RAO
Under Secretary to Government,
Department of Personnel and Administrative Reforms (Services-3).

P.R. 149

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಮಮಇ 12 ಎಸ್‌ಜೆಡಿ 2013, ಬೆಂಗಳೂರು, ದಿನಾಂಕ : 13-2-2013.

ಸರ್ಕಾರದ ಅಧಿಸೂಚನೆ ಸಂಖ್ಯೆ : ಮಮಇ 12 ಎಸ್‌ಜೆಡಿ 2013, ದಿನಾಂಕ : 10-1-2013ರ ಉಪ ನಿರ್ದೇಶಕರ ಪಟ್ಟಿಯಲ್ಲಿನ ಕ್ರಮ ಸಂಖ್ಯೆ: (1)ರ ಅಧಿಕಾರಿಯಾದ ಶ್ರೀಮತಿ ಶಹರ್ ಬಾನು ಇವರ ಜನ್ಮ ದಿನಾಂಕವನ್ನು "25-5-1953" ಎಂಬುದರ ಬದಲಿಗೆ "22-2-1953" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಮುಂದುವರೆದು ಸದರಿ ಅಧಿಸೂಚನೆಯಲ್ಲಿನ ಉಪ ನಿರ್ದೇಶಕರ ಪಟ್ಟಿಯಲ್ಲಿನ ಕ್ರಮ ಸಂಖ್ಯೆ : (4)ರ ಅಧಿಕಾರಿಯಾದ ಶ್ರೀಮತಿ ಮಾಲತಿ. ಎಸ್. ಪೋಳ್ ಇವರ ಹೆಸರನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ ಹಾಗೂ ಅವರ ಜನ್ಮ ದಿನಾಂಕವು ದಿನಾಂಕ : 7-6-1953 ಎಂಬುದರ ಬದಲಿಗೆ ದಿನಾಂಕ : 7-6-1956 ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು
ಹಿರಿಯ ನಾಗರೀಕರ ಸಬಲೀಕರಣ ಇಲಾಖೆ.

P.R. 150

INFRASTRUCTURE DEVELOPMENT SECRETARIAT

NOTIFICATION

No. IDD 64 NSW 2012, Bangalore, Dated: 7th November, 2012.

In pursuance of the Memorandum and Articles of Association of Rail Infrastructure Development Company (Karnataka) Limited and Memorandum and Articles of Association of Hassan Mangalore Rail Development Company Limited and in exercise of powers under Article 122 of the Article of Association of HMRDC Limited and under Article 123 of the Article of Association of K-RIDE, Government of Karnataka hereby nominate **Shri M. N. Vidhyshankar, IAS, Principal Secretary to Government, |Commerce and Industries Department,** Vikasa Soudha, Bangalore on the **Board of Directors of HMRDC and K-RIDE, Bangalore** vice Shri K. Jothiramalingam, I.A.S. retired on Superannuation on 31-05-2012

By Order and in the name of the Governor of Karnataka,
S. J. Sampath Kumar,
Under Secretary to Government,
Infrastructure Development Department

P.R. 151

INFRASTRUCTURE DEVELOPMENT SECRETARIAT

NOTIFICATION

No. IDD 96 NSW 2012, Bangalore, Dated: 24th September, 2012.

In pursuance of the Memorandum and Articles of Association of Konkan Railway Corporation Limited (KRCL) and in exercise of the powers under section 187-A of the Companies Act 1956, His Excellency the Governor of Karnataka shareholder of the Konkan Railway Corporation Limited hereby appoint Shri K. V. Rama, Deputy Secretary to Government, Infrastructure Development department, Vikasa Soudha Bangalore as nominee for exercising the same rights and power (including the right to vote by proxy) as a shareholder of the Konkan Railway Corporation Limited for the 22nd Annual General Meeting of Konkan Railway Corporation Limited scheduled to be held on 29th September 2012.

By Order and in the name of the Governor of Karnataka,
S. J. Sampath Kumar,
Under Secretary to Government,
Infrastructure Development Department

P.R. 152

ಇಂಧನ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಇಎನ್ 127 ಸಮನ್ವಯ 2012, ಬೆಂಗಳೂರು, ದಿನಾಂಕ 21–02–2013

ಸಮ ಸಂಖ್ಯೆಯ ದಿನಾಂಕ : 17–01–2013ರ ಸರ್ಕಾರದ ಅಧಿಸೂಚನೆಯಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಮತ್ತು ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ ಸಂಸ್ಥೆಗಳ ಮೆಮೊರ್‍ಯಾಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಆರ್ಟಿಕಲ್ 74(ಎ) ರನ್ವಯ ಡಾ॥ ಡಬ್ಲ್ಯೂ ಎಂ. ಶಿವಕುಮಾರ್, ನಿರ್ದೇಶಕರು (ತಾಂತ್ರಿಕ), ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಬೆಂಗಳೂರು, ಇವರನ್ನು ನಿರ್ದೇಶಕರು (ತಾಂತ್ರಿಕ), ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, ಮಂಗಳೂರು ಇಲ್ಲಿಗೆ ಹಾಗೂ ಶ್ರೀ ಹೆಚ್. ನಾಗೇಶ್, ನಿರ್ದೇಶಕರು (ತಾಂತ್ರಿಕ), ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, ಮಂಗಳೂರು ಇವರನ್ನು ನಿರ್ದೇಶಕರು (ತಾಂತ್ರಿಕ), ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಬೆಂಗಳೂರು, ಈ ಹುದ್ದೆಗಳಿಗೆ ಕ್ರಮವಾಗಿ ವರ್ಗಾಯಿಸಿ ನೇಮಿಸಿರುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಎ. ಚಪ್ಪರಬಂದ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

P.R. 153

ಸಹಕಾರ ಸಚಿವಾಲಯ

ಅಧಿಕೃತ ಜ್ಞಾಪನ

ಸಂಖ್ಯೆ : ಸಇ 181 ರರವಿ 2012, ಬೆಂಗಳೂರು, ದಿನಾಂಕ 25–02–2013

2012–13ನೇ ಸಾಲಿನ ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ ಹಾಗೂ ಮಹಿಳಾ ಉದ್ದೇಶಿತ ಆಯವ್ಯಯ ಪ್ರಗತಿ ಪರಿಶೀಲನೆಗೆ ಸಂಬಂಧಿಸಿದಂತೆ ಇಲಾಖೆಗಳು ತೆಗೆದುಕೊಂಡಿರುವ ಕ್ರಮದ ವರದಿಯನ್ನು ಕ್ರೋಢೀಕರಿಸಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ

ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ಕಳುಹಿಸಿಕೊಡಲು ಶ್ರೀ ಜಿ. ಎಸ್. ರಮಣರೆಡ್ಡಿ, ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ, ಇವರನ್ನು ಸಹಕಾರ ಇಲಾಖೆಯ ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

ದೂರವಾಣಿ ಸಂಖ್ಯೆ : 22353950, 22032368

ಇ–ಮೇಲ್ ವಿಳಾಸ : osdexis@gmail.com

ಈ. ಪಾಪಣ್ಣ,
ಸರ್ಕಾರದ ಅಧೀನ ಕಾರ್ಯದರ್ಶಿ–1,
ಸಹಕಾರ ಇಲಾಖೆ

P.R. 155

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಆಕುಕ 63 ಪಿಐಎಂ 2013, ಬೆಂಗಳೂರು, ದಿನಾಂಕ 01–03–2013

ಸರ್ಕಾರದ ಆದೇಶ ಸಂಖ್ಯೆ ಆಕುಕ 357 ಪಿಐಎಂ 2012 ದಿನಾಂಕ 24–01–2013ಕ್ಕೆ ಹೊರಡಿಸಲಾಗಿದ್ದ ತಿದ್ದುಪಡಿ ಆದೇಶ ಸಂಖ್ಯೆ ಆಕುಕ 63 ಪಿಐಎಂ 2012 ದಿನಾಂಕ 16–02–2013ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದು, ದಿನಾಂಕ 24–01–2013ರಂದು ಹೊರಡಿಸಲಾಗಿದ್ದ ಆದೇಶವನ್ನು ಸ್ಥಿರೀಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಎನ್. ಹರಿಣಿಯಮ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ)

P.R. 154

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಆಕುಕ 578 ಪಿಐಎಂ 2013, ಬೆಂಗಳೂರು, ದಿನಾಂಕ 26–02–2013

ಡಾ॥ ರಫಿಯಾ ಬೇಗಂ, ವೈದ್ಯರು ದರ್ಜೆ–1(ಯು) (ಪ್ರಸ್ತುತ ಉಪನಿರ್ದೇಶಕರು(ಯು) ಹುದ್ದೆಯ ಪ್ರಭಾರದಲ್ಲಿರುವ) ಆಯುಷ್ ಇಲಾಖೆ ಇವರಿಗೆ ರೂ : 36,300–53,850 ವೇತನ ಶ್ರೇಣಿ ಹೊಂದಿದ ಉಪನಿರ್ದೇಶಕರು(ಯು) ಹುದ್ದೆಗೆ ಸ್ಥಾನಪನ್ನ ಪದೋನ್ನತಿ ನೀಡಿ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಆಯುಷ್ ಇಲಾಖೆಯಲ್ಲಿನ ಉಪನಿರ್ದೇಶಕರು(ಯು) ಹುದ್ದೆಗೆ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಎನ್. ಹರಿಣಿಯಮ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾರತೀಯ ವೈದ್ಯ ಪದ್ಧತಿ)

P.R. 156